ನಾವು ಪಕ್ಕಾ ಕನ್ನಡದವರು. ಆದರೂ ನಮ್ಮ ಮನೆಯೊಳಗ ಎಲ್ಲರಿಗೂ ಮರಾಠಿ ಬರತದ. ಸಮಸ್ಯೆ ಜನರದ್ದಲ್ಲ. ರಾಜಕಾರಣ ಮಾಡುವಂಥ ಕನ್ನಡದವರದು, ಮರಾಠಿಯವರದು. ಅವರ ಮರಾಠಿ ಹೆಸರಿನ ಮೇಲೆ ಇವರೂ, ಇವರ ಕನ್ನಡದ ಹೆಸರಿನ ಮೇಲೆ ಅವರೂ ಬದುಕ್ತಾ ಅದಾರ. ತಮ್ಮ ಲಾಭಕ್ಕಾಗಿ ಜನರ ಸೆಂಟಿಮೆಂಟ್ಸ್ ಉಪಯೋಗಿಸ್ತಾರ. ರಾಜಕಾರಣ ಒಂದು ಪ್ರೊಫೆಶನ್ ಅದ. ಅದಕ ಬೆಳಗಾಂವಿ ಜನರದು ಡೈರೆಕ್ಟ್ ಕಾಂಟ್ರಿಬ್ಯೂಶನ್ ಏನೂ ಇಲ್ಲ. ಹೊರಗಿನವರು ಬರ್ತಾರ. ಗದ್ದಲ ಮಾಡಿಸ್ತಾರ. ಕನ್ನಡಕ್ಕ, ನಮ್ಮ ಚೀಫ್ ಮಿನಿಸ್ಟರಗ, ಎಲ್ಲಾ ಬೈತಾರ. ಮುಗಿದು ಹೋಯಿತು. ಸಾಮಾನ್ಯ ಜನ ಏನಿದಾರೆ, ಅವರು ತಲೀನೇ ಕೆಡಿಸಿಕೊಳ್ಳೋದಿಲ್ಲ. ಅವರು ತಮ್ಮ ಸಂಬಂಧಗಳು ಏನವ, ಅವನ್ನ ಚನ್ನಾಗೇ ಇಟ್ಟುಕೊಂಡಾರ.

◆ **ಒಂಬತ್ತು ದಶಕಗಳ ಬಾಳುವೆ ನಡೆಸಿದ್ದೀರಿ. ತಿರುಗಿ ನೋಡುವಾಗ ಜೀವನ ಹ್ಯಾಗೆ ಕಾಣ್ತದೆ?**

ಫಿಜಿಕಲಿ ವೀಕ್ ಆಗಿರೊ ಕಾರಣದಿಂದ ಮೆಂಟಲಿ ಡಿಪ್ರೆಶನ್ ಬರ್ತದ. ಅದನ್ನ ಹೋಗಲಾಡಿಸೋಕೇ ನಾನು ಪೇಂಟಿಂಗ್ ಮಾಡ್ತೀನಿ. ನನ್ನ ಜೀವನದಲ್ಲಿ ಸಾರ್ಥಕತೆ ಕಂಡಿದ್ದೇ ಚಿತ್ರಕಲೆಗೆ ಬಂದು; ಸಾಹಿತ್ಯದೊಳಗ ಬಂದು. ಸಾವು ಅನ್ನೋದು ನ್ಯಾಚರಲ್ ಪ್ರಾಸಸ್ ಅದ; ಒಂದು ಫೇಜ್ ಅದ. ಅಷ್ಟು ಬಿಟ್ಟರೆ ಅದಕ್ಕೆ ಬಹಳ ಮಹತ್ವ ಇಲ್ಲ. ನಾವು ಹ್ಯಾಂಗ ಅಕ್ಸೆಪ್ಟ್ ಮಾಡ್ತೀವಿ ಅನ್ನೋದರ ಮ್ಯಾಲ ಅದರ ಅರ್ಥ ಅದ. ಜೀವನಪೂರ್ತಿ ಕ್ರಿಯೇಟಿವ್ ಆಕ್ಟಿವಿಟಿಯಲ್ಲಿ ತೊಡಗಿದ್ದೆವು ಅಂತಂದ್ರ ಸಾವಿನ ಭಯ ಇರೋದಿಲ್ಲ. ಕ್ರಿಯೇಟಿವಿಟಿ ಸಾವನ್ನು ಗೆಲ್ತದ. ಕಲಾವಿದನಿಗೆ ತನ್ನ ಕಲೆಯೇ ದೇವರು. ಅದರ ಆರಾಧನೆಯೇ ದೇವರ ಆರಾಧನೆ. ಈ ಆರಾಧನೆಯಿಂದ ಮಾನಸಿಕ ಶಾಂತಿ ಮತ್ತು ತೃಪ್ತಿ ಸಿಗ್ತದ.

◆ **ಈಗೇನು ಬರೀತಾ ಇದೀರಿ?**

ಆತ್ಮಕತೆ ಬರೀತಾ ಇದೇನೆ. ಅದರೊಳಗೆ ಗುಲ್ಬರ್ಗಾನೇ ಒಂದು ಕ್ಯಾರಕ್ಟರ್ ಆಗ್ಯದ. ಅದರೊಳಗ ಹಲವಾರು ಪರ್ಸನಾಲಿಟಿ ಬರ್ತಾವ. ಅವರೊಳಗ ನಾನೂ ಒಬ್ಬ. ಅಲ್ಲಿ ದೀರ್ಘವಾದ ಕಾವ್ಯ ಬರ್ತದ. ಸ್ವತಃ ಊರು ತನ್ನ ಪರಿಚಯ ಕೊಡ್ತ ಹೇಳ್ತದ–ಇಂವ ನಮ್ಮಲ್ಲಿ ಇದ್ದವ ಅಂತ. ಇನ್ನೊಂದು ಐವತ್ತು ಪುಟ ಬರೆದರ ಮುಗೀತದ. ಮುಗಸ್ತೀನಿ.

## ರಹಮತ್ ತರೀಕೆರೆ

ಕನ್ನಡದ ಪ್ರಮುಖ ಲೇಖಕ ರಹಮತ್ ಚಿಕ್ಕಮಗಳೂರು ಜಿಲ್ಲೆಯ ತರೀಕೆರೆಯವರು. ಸಾಹಿತ್ಯ ವಿಮರ್ಶೆ, ಸಂಶೋಧನೆ, ಪ್ರವಾಸ ಕಥನ, ವಿಚಾರ ಸಾಹಿತ್ಯ, ಜೀವನ ಚರಿತ್ರೆ ಸಾಹಿತ್ಯ ಮೀಮಾಂಸೆ ಪ್ರಕಾರಗಳಲ್ಲಿ ಪುಸ್ತಗಳನ್ನು ಬರೆದಿದ್ದಾರೆ. 'ಪ್ರತಿಸಂಸ್ಕೃತಿ', 'ಮರದೊಳಗಣ ಕಿಚ್ಚು', 'ಅಮೀರ್‌ಬಾಯಿ ಕರ್ನಾಟಕಿ', 'ನಡೆದಷ್ಟೂ ನಾಡು', 'ಕರ್ನಾಟಕದ ನಾಥ ಪಂಥ', 'ಕರ್ನಾಟಕದ ಸೂಫಿಗಳು' 'ಅಂಡಮಾನ್ ಕನಸು', 'ಕತ್ತಿಯಂಚಿನ ದಾರಿ', 'ಲೋಕವಿರೋಧಿಗಳ ಜೊತೆಯಲ್ಲಿ'. ರಹಮತ್, ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಸಾಹಿತ್ಯ ಅಧ್ಯಯನ ವಿಭಾಗದಲ್ಲಿ ಪ್ರಾಧ್ಯಾಪಕರು.